ಕುಣಿಗಲ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

123 (130) ಶ್ರೀ ರಾಮಸ್ವಾಮಿಗೌಡ ಬಿ. ಬಿ. (ಕುಣಿಗಲ್):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕಿನ ಹಲವು ಗ್ರಾಮಗಳಿಗೆ ಕೊತ್ತಗೆರೆ ಕೆರೆಯಿಂದ ರೂಪಿಸಿರುವ ಸಂಪೂರ್ಣ ಕುಡಿಯುವ ನೀರು ಯೋಜನೆ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಜರೂರಾಗಿ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಕುಣಿಗಲ್ ತಾಲ್ಲೂಕು, ಕೊತ್ತಗೆರೆ ಕೆರೆಯ ಜಲಮೂಲ ಆಧರಿಸಿ ಕೊತ್ತಗೆರೆ ಮತ್ತು ಇತರೆ 8 ಗ್ರಾಮಗಳಿಗಾಗಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂಪಿಸಲಾಗಿದೆ. ದಿನಾಂಕ 01–10–2011 ರಂದು ನಡೆದ SLSSC ಸಭೆಯಲ್ಲಿ ಈ ಯೋಜನೆಯ ವಿಸ್ತೃತ ಅಂದಾಜನ್ನು ರೂ. 544.00 ಲಕ್ಷ ಮಿತಿಯೊಳಗೆ ತಯಾರಿಸಲು ಸಭೆ ಸಮ್ಮತಿಸಿದೆ. ಈ ಯೋಜನೆಯ ಪ್ರಾಥಮಿಕ ಹಂತದ ವರದಿ ಆಧರಿಸಿ ಯೋಜನೆಯ ಜಲಮೂಲ ಮತ್ತು ಪ್ರಸ್ತಾವಿತ ಮುಖ್ಯ ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಕೆ ಆಧ್ಯತೆ ಮೇಲೆ ನಡೆದಿದೆ.

ಕುಣಿಗಲ್ ತಾಲ್ಲೂಕಿನಲ್ಲಿ ಆರಾಧನೆ ಸಮಿತಿಗೆ ಅನುದಾನ

125 (132) ಶ್ರೀ ರಾಮಸ್ವಾಮಿಗೌಡ ಬಿ. ಬಿ. (ಕುಣಿಗಲ್):– ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕಿನ ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರ, ಕೈಂಕರ್ಯ ಇತ್ಯಾದಿಗಳಿಗಾಗಿ ಹಣ ನೀಡಲು ಸ್ಥಳೀಯ ಆರಾಧನಾ ಸಮಿತಿಗೆ ಸರ್ಕಾರ ಅನುದಾನಗಳನ್ನು ಬಿಡುಗಡೆ ಮಾಡದಿರುವುದರಿಂದ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;